| ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

**ಎಸ್.ಸಿ. 21/2019**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಇಂದ್ರಮ್ಮ | ಪ್ರಮಾಣ ಮಾಡಿದ ದಿನಾಂಕಃ |
| ಗಂಡನ ಹೆಸರು | ಃ ಜೈಶೀಲನ್ | **17.10.2022** |
| ವಯಸ್ಸು | ಃ 55 ವರ್ಷ | |
| ವೃತ್ತಿ | ಃ ಏನೂ ಇಲ್ಲ | ಪಿಡಬ್ಲ್ಯೂ ಃ 08 |
| ವಾಸ ಸ್ಥಳ | ಃ ಮೈಸೂರು | ಸಿಡಬ್ಲ್ಯೂ ಃ 16 |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

**ಪ್ರಾಸಾ-7 ನನ್ನ ಅಕ್ಕನ ಮಗ. ಮೃತ ಪವಿತ್ರಾಕುಮಾರಿ ಹಾಗೂ ವೇದಾವತಿ ನಮ್ಮ ಮನೆಯ ಅಕ್ಕಪಕ್ಕದವರು. ಅವರಿಬ್ಬರ ನಡುವೆ ಇದ್ದ ಹಣಕಾಸಿನ ವ್ಯವಹಾರ ಇತ್ತು. ಮೃತಳು ಆರೋಪಿ ಕಡೆ ಸಾಲ ಪಡೆದಿ ದ್ದುದಾಗಿ ತಿಳಿದಿದ್ದೇನೆ. ಆರೋಪಿ ಮೃತಳ ಮನೆಗೆ ಆಗಾಗ್ಗೆ ಹೋಗಿ ಹಣ, ಬಡ್ಡಿ ಕೊಡುವಂತೆ ಗಲಾಟೆ ಮಾಡುತ್ತಿದ್ದಳು. ನಾನು ನೋಡಿದಂತೆ ಈ ರೀತಿ 2-3 ಬಾರಿ ಗಲಾಟೆ ಮಾಡಿದ್ದಳು. ಕೊನೆಯ ಬಾರಿ ರೂ.3 ಲಕ್ಷ ಹಣ ಕೊಡು ಇಲ್ಲದಿದ್ದರೆ ಎಲ್ಲಾದರೂ ಹೋಗಿ ಸಾಯಿ ಎಂದು ಬೈದಿದ್ದಳು. ದಿನಾಂಕ 07.06.2015ರಂದು ಸಂಜೆ 6 ಗಂಟೆಗೆ ಆರೋಪಿ ಮೃತಳ ಮನೆಗೆ ಹೋಗಿ ಈ ರೀತಿ ಗಲಾಟೆ ಮಾಡಿದ್ದಳು. ನಾನು ಮತ್ತು ಪ್ರಾಸಾ-7ರವರು ಸಮಾಧಾನ ಮಾಡಿ ಕಳಿಸಿದ್ದೆವು. ದಿನಾಂಕ 11.06.2015ರಂದು ಪವಿತ್ರಾಕುಮಾರಿ ಆರೋಪಿಯ ಕಾಟ ತಾಳಲಾರದೇ ವಿಷ ಕುಡಿದಿದ್ದಳು. ನಂತರ ಮೃತಪಟ್ಟಿರುತ್ತಾಳೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ.**

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ .ರವರಿಂದಃ-**

**ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕೊಡಲಾಗಿದೆ.**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**17.10.2022.**
(ಎಂ.ಎಲ್. ರಘುನಾಥ್)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**